KARNATAK UNIVERSITY, DHARWAD
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

Examination G.A.D. Section
ಪರೀಕ್ಷಾ ಸಾಮಾನ್ಯ ಆಡಳಿತ ವಿಭಾಗ

"NAAC Accredited with "A" Grade 2022"

ಪಾವಟೆನಗರ, ಧಾರವಾಡ
Pavate Nagar, Dharwad

Tel Ph No. 0836-2215267
Website : www.kud.ac.in

ನಂ:/ಕವಿವಿ/ಪರೀಕ್ಷಾ/ಜಿಎಡಿ/2026/ 313

ದಿನಾಂಕ: 08/06/2026

## ಅಧಿಸೂಚನೆ

**ವಿಷಯ:** ಜುಲೈ/ಅಗಸ್ಟ 2026 ರಲ್ಲಿ ಜರುಗುವ ಎಲ್ಲ ಸ್ನಾತಕೋತ್ತರ 2 ಮತ್ತು 4 ನೇ ಸೆಮಿಸ್ಟರ್ (ರೆಗ್ಯೂಲರ್/ರಿಪರೀಟರ್ಸ್) ಹಾಗೂ ಎಲ್ಲ ಡಿಪ್ಲೋಮಾ, ಅಡ್ವಾನ್ಸ್ ಡಿಪ್ಲೋಮಾ ಹಾಗೂ ಸರ್ಟಿಫಿಕೇಟ್ ಕೋರ್ಸಗಳ ಪರೀಕ್ಷಾ ಅರ್ಜಿ/ಶುಲ್ಕ ತುಂಬುವ ಕುರಿತು.

**ಉಲ್ಲೇಖ:** ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 08/6/2026

*****@*****

ಎಲ್ಲ ಸ್ನಾತಕೋತ್ತರ 2 ಮತ್ತು 4 ನೇ ಸೆಮಿಸ್ಟರ್ (ರೆಗ್ಯುಲರ್/ರಿಪೀಟರ್ಸ್) ಹಾಗೂ ಎಲ್ಲ ಡಿಪ್ಲೋಮಾ, ಅಡ್ವಾನ್ಸ್ ಡಿಪ್ಲೋಮಾ ಹಾಗೂ ಸರ್ಟಿಫಿಕೇಟ್ ಕೋರ್ಸಗಳ ಪರೀಕ್ಷೆಗಳು ಜುಲೈ/ಆಗಸ್ಟ 2026 ರಲ್ಲಿ ಜರುಗುವವು. ಸದರಿ ಪರೀಕ್ಷೆಗಳ ವಿವರವಾದ ವೇಳಾಪಟ್ಟಿಯನ್ನು ನಂತರ UUCMS ತಂತ್ರಾಂಶದಲ್ಲಿ ಹಾಗೂ ಕವಿವಿ ಅಂತರ್ಜಾಲ **www.kud.ac.in (Notification)** ದಲ್ಲಿ ಪ್ರಕಟಿಸಲಾಗುವುದು.

ಕವಿವಿ ಎಲ್ಲ ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರು, ಸಂಯೋಜಕರು, ಆಡಳಿತಾಧಿಕಾರಿಗಳು ಹಾಗೂ ಎಲ್ಲ ಸ್ನಾತಕೋತ್ತರ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, ಜುಲೈ/ಆಗಸ್ಟ 2026 ರಲ್ಲಿ ಜರಗುವ ಸ್ನಾತಕೋತ್ತರ 2 ಮತ್ತು 4 ನೇ ಸೆಮಿಸ್ಟರ್ (ರೆಗ್ಯುಲರ್/ರೀಪಿಟರ್ಸ್) ಹಾಗೂ ಎಲ್ಲ ಡಿಪ್ಲೋಮಾ, ಅಡ್ವಾನ್ಸ್ ಡಿಪ್ಲೋಮಾ ಹಾಗೂ ಸರ್ಟಿಫಿಕೇಟ್ ಕೋರ್ಸುಗಳ ಪರೀಕ್ಷೆಗಳಿಗೆ ವಿದ್ಯಾರ್ಥಿಗಳಿಂದ UUCMS ತಂತ್ರಾಂಶದ ಮೂಲಕ ಪರೀಕ್ಷಾ ಅರ್ಜಿ/ಶುಲ್ಕಗಳನ್ನು ತುಂಬಿಸಿಕೊಳ್ಳುವಾಗ ಈ ಕೆಳಗಿನ ವಿವರವಾದ ಸೂಚನೆಗಳನ್ನು ಹಾಗೂ ಕೊನೆಯ ದಿನಾಂಕವನ್ನು ಗಮನಿಸಬೇಕು. ಪರೀಕ್ಷಾ ವಿಭಾಗಕ್ಕೆ ಅರ್ಜಿಗಳನ್ನು ಸಲ್ಲಿಸುವಾಗ ಪಾವತಿಸಿದ ಮೂಲ ಚಲನ ಪ್ರತಿ ಹಾಗೂ ಅಗತ್ಯ ದಾಖಲೆಗಳ ಝುರಾಕ್ಸ ಪ್ರತಿಗಳನ್ನು ಲಗತ್ತಿಸಿ ಸಲ್ಲಿಸಬೇಕು. ನಾನ್ ಯು.ಯು.ಸಿ.ಎಂ.ಎಸ್. ಗೆ ಸಂಬಂಧಿಸಿದ ವಿದ್ಯಾರ್ಥಿಗಳು ಪರೀಕ್ಷಾ ಅರ್ಜಿ ತುಂಬಲು ಅರ್ಹರಿರುವ ಬಗ್ಗೆ ಮುಖ್ಯಸ್ಥರು/ಪ್ರಾಚಾರ್ಯರಿಂದ ಖಚಿತಪಡಿಸಿಕೊಂಡು ಕ.ವಿ.ವಿ. ಅಂತರಜಾಲದಿಂದ ಪರೀಕ್ಷಾ ಅರ್ಜಿ ಪಡೆದು SBI Collect ನಲ್ಲಿ ಶುಲ್ಕ ತುಂಬಿ ಅರ್ಜಿ ಸಲ್ಲಿಸುವುದು.

1. **ದಿನಾಂಕ:08.06.2026** ರಿಂದ ವಿದ್ಯಾರ್ಥಿಗಳು ಪರೀಕ್ಷಾ ಅರ್ಜಿಯನ್ನು UUCMS ತಂತ್ರಾಂಶದ ಮೂಲಕ ಪರೀಕ್ಷಾ ಶುಲ್ಕ ಭರಿಸಿ ವಿಭಾಗಕ್ಕೆ / ಕೇಂದ್ರಕ್ಕೆ / ಮಹಾವಿದ್ಯಾಲಯಕ್ಕೆ ದಂಡವಿಲ್ಲದೆ ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ:18.06.2026.**
2. ವಿದ್ಯಾರ್ಥಿಗಳು **ರೂ.200/-** ಮೊದಲನೆಯ ದಂಡದೊಂದಿಗೆ ಪರೀಕ್ಷಾ ಅರ್ಜಿಯನ್ನು UUCMS ತಂತ್ರಾಂಶದ ಮೂಲಕ ಪರೀಕ್ಷಾ ಶುಲ್ಕ ಭರಿಸಿ ವಿಭಾಗಕ್ಕೆ / ಕೇಂದ್ರಕ್ಕೆ / ಮಹಾವಿದ್ಯಾಲಯಕ್ಕೆ ಸಲ್ಲಿಸಲು ಕೊನೆಯ **ದಿನಾಂಕ: 20.06.2026.**
3. ವಿದ್ಯಾರ್ಥಿಗಳು **ರೂ.220/-** ಎರಡನೆಯ ದಂಡದೊಂದಿಗೆ ಪರೀಕ್ಷಾ ಅರ್ಜಿಯನ್ನು UUCMS ತಂತ್ರಾಂಶದ ಮೂಲಕ ಪರೀಕ್ಷಾ ಶುಲ್ಕ ಭರಿಸಿ ವಿಭಾಗಕ್ಕೆ / ಕೇಂದ್ರಕ್ಕೆ / ಮಹಾವಿದ್ಯಾಲಯಕ್ಕೆ ಸಲ್ಲಿಸಲು ಕೊನೆಯ **ದಿನಾಂಕ: 23.06.2026.**
4. ಎಲ್ಲ ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರು, ಸಂಯೋಜಕರು, ಆಡಳಿತಾಧಿಕಾರಿಗಳು ಹಾಗೂ ಎಲ್ಲ ಸ್ನಾತಕೋತ್ತರ ಮಹಾವಿದ್ಯಾಲಯಗಳ ಪ್ರಾಚಾರ್ಯರು ದಂಡವಿಲ್ಲದೆ ಹಾಗೂ ದಂಡದೊಂದಿಗೆ ಸ್ವೀಕರಿಸಿದ ಪರೀಕ್ಷಾ ಅರ್ಜಿಗಳನ್ನು ಹಾಗೂ ಆನ್‌ಲೈನ್ ಮುಖಾಂತರ ಭರಿಸಿದ ಪರೀಕ್ಷಾ ಶುಲ್ಕದ ರಶೀದಿಗಳೊಂದಿಗೆ ವಿವರವಾದ ಯಾದಿಯನ್ನು ತಯಾರಿಸಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸುವ ಕೊನೆಯ **ದಿನಾಂಕ: 24.06.2026.**

## ವಿಶೇಷ ಸೂಚನೆಗಳು

1. ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯ ಎಲ್ಲ ಮಹಾವಿದ್ಯಾಲಯಗಳು ಪ್ರತಿ ಶೈಕ್ಷಣಿಕ ವರ್ಷಕ್ಕೆ ಸಂಯೋಜನೆಯನ್ನು ಪಡೆಯುವದು ಕಡ್ಡಾಯವಾಗಿರುತ್ತದೆ. ಕೆಲವೊಂದು ಮಹಾವಿದ್ಯಾಲಯಗಳಿಂದ ಸಂಯೋಜನೆಯ ಅಧಿಸೂಚನೆಯನ್ನು ಪಡೆಯದೇ ವಿದ್ಯಾರ್ಥಿಗಳ ಪ್ರವೇಶ ಯಾದಿಯನ್ನು ಹಾಗೂ ವಿದ್ಯಾರ್ಥಿಗಳ ಪರೀಕ್ಷಾ ಅರ್ಜಿಗಳನ್ನು ಪರೀಕ್ಷಾ ವಿಭಾಗಕ್ಕೆ ಸಲ್ಲಿಸಿರುವುದನ್ನು ಗಮನಿಸಲಾಗಿದೆ ಸಂಯೋಜನೆಯ ಅಧಿಸೂಚನೆಯನ್ನು ಪಡೆಯದೆ ಇದ್ದಲ್ಲಿ ಮಹಾವಿದ್ಯಾಲಯಗಳಲ್ಲಿ ವ್ಯಾಸಂಗ ಕ್ರಮಗಳನ್ನು ಮುಂದುವರೆಸುವದಕ್ಕೆ/ವಿಸ್ತರಿಸುವದಕ್ಕೆ ಮಾನ್ಯತೆ ಇರುವುದಿಲ್ಲ ಹಾಗೂ ಅಂತಹ ಮಹಾವಿದ್ಯಾಲಯಗಳ ವಿದ್ಯಾರ್ಥಿಗಳು ಪರೀಕ್ಷೆಗೆ ಅರ್ಜಿ ತುಂಬಲು ಸಹ ಅರ್ಹರಿರುವುದಿಲ್ಲ. ಆದ್ದರಿಂದ ಪರೀಕ್ಷಾ ಅರ್ಜಿಗಳನ್ನು ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗಕ್ಕೆ ಸಲ್ಲಿಸುವಾಗ ಸಿಡಿಸಿ/ಸಂಯೋಜನೆ ವಿಭಾಗದಿಂದ ಪಡೆದ ಪ್ರಸಕ್ತ ವರ್ಷದ ಅಧಿಸೂಚನೆಯನ್ನು ಕಡ್ಡಾಯವಾಗಿ ಲಗತ್ತಿಸುವದು

ಮು.ತಿ.ನೋ

2. ಸ್ನಾತಕೋತ್ತರ (ಸಿಬಿಎಸ್‌ಸಿ) ಕಾಯಿದೆ (Regulation) 9.1.6 ಪ್ರಕಾರ ಅನುತ್ತೀರ್ಣರಾದ ವಿದ್ಯಾರ್ಥಿಗಳು ಹಾಗೂ ಅಂಕಸುದಾರಣೆ ಬಯಸುವ ವಿದ್ಯಾರ್ಥಿಗಳು ನಿಯಮಿತ (ರೆಗ್ಯುಲರ) ವಿದ್ಯಾರ್ಥಿಯಾಗಿ ಕೋರ್ಸ/ಕೋರ್ಸಗಳನ್ನು ಮುಗಿಸಿದ ನಂತರದ ಎರಡು ಪರೀಕ್ಷೆಗಳಿಗೆ ಕುಳಿತುಕೊಳ್ಳಬಹುದು. ಅಂತಹ ವಿದ್ಯಾರ್ಥಿಗಳು ಪರೀಕ್ಷಾ ಫಾರ್ಮ/ಶುಲ್ಕ ತುಂಬಲು ಅರ್ಹರಾಗಿರುತ್ತಾರೆ. **ಅಂದರೆ 2 ವರ್ಷದ ಪದವಿಯನ್ನು ನಿಯಮಾನುಸಾರ 4 ವರ್ಷದೊಳಗಾಗಿ ಪೂರ್ಣಗೊಳಿಸಬೇಕಾಗುತ್ತದೆ. ಆದುದರಿಂದ Double the Duration of the Course ನ ಅವಧಿಯನ್ನು ಮುಕ್ತಾಯಗೊಳಿಸಿರುವ ವಿದ್ಯಾರ್ಥಿಗಳು ಪರೀಕ್ಷಾ ಅರ್ಜಿ/ಶುಲ್ಕ ತುಂಬಲು ಅರ್ಹರಾಗಿರುವುದಿಲ್ಲ.**

## <u>ಸೂಚನೆಗಳು</u>

1. ಅಂತರ್ಜಾಲದ (ಆನ್‌ಲೈನ) ಪರೀಕ್ಷಾ ಅರ್ಜಿಗಳನ್ನು ಸಂಬಂಧಪಟ್ಟ ಎಲ್ಲ ವಿಭಾಗದವರು/ಕೇಂದ್ರದವರು/ಮಹಾವಿದ್ಯಾಲಯಗಳ ಪ್ರಾಚಾರ್ಯರು ಈ ಮುಂದಿನ ಷರುತ್ತುಗಳಿಗೆ ಒಳಪಟ್ಟು ಸಹಿ ಮಾಡಬೇಕು. ಪ್ರತಿ ಸೆಮೆಸ್ಟರ/ಪ್ರತಿ ವಿಷಯದಲ್ಲೂ ಕನಿಷ್ಠ 75% ಹಾಜರಾತಿಯನ್ನು ಪೂರೈಸದ ವಿದ್ಯಾರ್ಥಿಗಳಿಗೆ ಪರೀಕ್ಷಾ ಅರ್ಜಿ ನಮೂನೆಗಳನ್ನು ರದ್ದುಪಡಿಸುವ ಷರುತ್ತುಗಳಿಗೆ ಒಳಪಟ್ಟಿರುತ್ತದೆ. ಎಲ್ಲ ವಿಭಾಗದವರು/ಕೇಂದ್ರದವರು/ಮಹಾವಿದ್ಯಾಲಯಗಳ ಪ್ರಾಚಾರ್ಯರ ಕೋರಿಕೆಯ ಮೇರೆಗೆ ಅಂತಹ ವಿದ್ಯಾರ್ಥಿಗಳ ಪರೀಕ್ಷೆಯ ಪ್ರವೇಶ ಪತ್ರಗಳನ್ನು (ಹಾಲ್ ಟಿಕೆಟ) ಫ್ರೀಜ್ಡ/ತಡೆಹಿಡಿಯಲಾಗುತ್ತದೆ. ಅಂತಹ ವಿದ್ಯಾರ್ಥಿಗಳಿಗೆ ಅಂತರ್ಜಾಲದಲ್ಲಿ ಭರ್ತಿ ಮಾಡಿದ ಪರೀಕ್ಷಾ ಅರ್ಜಿಯ ಆಧಾರದ ಮೇಲೆ ಪರೀಕ್ಷೆ ಬರೆಯಲು ಅವಕಾಶ ನೀಡುವದಿಲ್ಲ. ಯು.ಜಿ.ಸಿ ನಿಯಮಗಳ ಪ್ರಕಾರ ವಿದ್ಯಾರ್ಥಿಗಳು ಕಡ್ಡಾಯವಾಗಿ 75% ರಷ್ಟು ಹಾಜರಾತಿಯನ್ನು ಪೂರೈಸಿರಬೇಕು.

2. ಪರೀಕ್ಷಾ ಶುಲ್ಕದ ಜೊತೆಗೆ ಪ್ರತಿ ವಿದ್ಯಾರ್ಥಿಯು **ರೂ.110/-**ನ್ನು ಅಂತರ್ಜಾಲದ ಪರೀಕ್ಷಾ ಅರ್ಜಿ ನಮೂನೆಯ ಪ್ರಕ್ರಿಯೆ ಶುಲ್ಕವನ್ನು (ಪ್ರತಿ ಸೆಮೆಸ್ಟರಗೆ) ಮತ್ತು **ರೂ.160/-**ನ್ನು ಅಂಕಪಟ್ಟಿ ಶುಲ್ಕ ಹಾಗೂ ಕೊನೆಯ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಉತ್ತೀರ್ಣ ಪ್ರಮಾಣ ಪತ್ರ ಶುಲ್ಕ **ರೂ.215/-** ಗಳನ್ನು ಪಾವತಿಸಬೇಕಾಗುತ್ತದೆ.

3. ಸಂಬಂಧಪಟ್ಟ ಪದವಿಗಳ ವಿದ್ಯಾರ್ಥಿಗಳು ಪ್ರೊಜೆಕ್ಟ್ ವರ್ಕ/ಫಿಲ್ಡ್ ವರ್ಕ ರಿಪೋರ್ಟ ಮೌಲ್ಯಮಾಪನ/ ವೈವಾ ಶುಲ್ಕ **ರೂ.590/-** ಗಳು, ರಿಪೀಟರ್ಸ್ ವಿದ್ಯಾರ್ಥಿಗಳ ಪರೀಕ್ಷಾ ಅರ್ಜಿಯ ಪ್ರಕ್ರಿಯೆ ಶುಲ್ಕ **ರೂ.110/–** ಗಳು ಹಾಗೂ ಕೊನೆಯ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಉತ್ತೀರ್ಣ ಪ್ರಮಾಣ ಪತ್ರದ ಶುಲ್ಕ **ರೂ.215/-** ಗಳು ಕಾರಣಾಂತರಗಳಿಂದ ಯು.ಯು.ಸಿ.ಎಂ.ಎಸ್. ತಂತ್ರಾಂಶದಲ್ಲಿ ಸೇರ್ಪಡೆಯಾಗಿರುವದಿಲ್ಲ. ಕಾರಣ, ವಿಭಾಗದ ಮುಖ್ಯಸ್ಥರು, ಸಂಯೋಜಕರು, ಆಡಳಿತಾಧಿಕಾರಿಗಳು ಹಾಗೂ ಮಹಾವಿದ್ಯಾಲಯದ ಪ್ರಾಚಾರ್ಯರು ಅಂತಹ ವಿದ್ಯಾರ್ಥಿಗಳಿಂದ ಎಲ್ಲ ಮೊತ್ತವನ್ನು ಕ್ರೋಢಿಕರಿಸಿ SBI Collect Online ಮುಖಾಂತರ ನಿಗದಿಪಡಿಸಿದ ಕೊನೆಯ ದಿನಾಂಕದೊಳಗಾಗಿ ವಿಶ್ವವಿದ್ಯಾಲಯಕ್ಕೆ ಭರಿಸುವುದು.

4. **ಕರ್ನಾಟಕ ಸರ್ಕಾರವು SSP ಮೂಲಕ Cat-I/IIA/IIB/IIIA/IIIB ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ಹಾಗೂ SC/ST ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ಅವರವರ ಖಾತೆಗಳಿಗೆ ನೇರವಾಗಿ ವರ್ಗಾಯಿಸುವುದರಿಂದ ಅಂತಹ ವಿದ್ಯಾರ್ಥಿಗಳು ಪೂರ್ಣ ಪರೀಕ್ಷಾ ಶುಲ್ಕವನ್ನು ಪಾವತಿಸುವುದು.**

5. ವಿಶ್ವವಿದ್ಯಾಲಯವು ನಿಗದಿಪಡಿಸಿದ ಕೊನೆಯ ದಿನಾಂಕದ ನಂತರ ಬರುವ ಯಾವುದೇ ಪರೀಕ್ಷಾ ಅರ್ಜಿಗಳನ್ನು ತೆಗೆದುಕೊಳ್ಳುವುದಿಲ್ಲ/ಪರಿಗಣಿಸಲಾಗುವದಿಲ್ಲ. ಅಲ್ಲದೆ, ಅಂತರ್ಜಾಲದ ಪರೀಕ್ಷಾ ಅರ್ಜಿ ನಮೂನೆಗಳನ್ನು ವಿದ್ಯಾರ್ಥಿಗಳು ಭರ್ತಿಮಾಡಲು ನೇರವಾಗಿ ಪರೀಕ್ಷಾ ವಿಭಾಗವನ್ನು ಸಂಪರ್ಕಿಸದಿರಲು ವಿದ್ಯಾರ್ಥಿಗಳಿಗೆ ತಿಳಿಸಲು ಎಲ್ಲ ವಿಭಾಗದವರು/ಕೇಂದ್ರದವರು ಕಾಲೇಜುಗಳ ಪ್ರಾಚಾರ್ಯರಿಗೆ ಸೂಚಿಸಲಾಗಿದೆ.

6. ಎಲ್ಲ ವಿಭಾಗದವರು/ಕೇಂದ್ರದವರು/ಮಹಾವಿದ್ಯಾಯದ ಪ್ರಾಚಾರ್ಯರು ಮಾಹಿತಿಯ ಯಾದಿಯೊಂದಿಗೆ ಪರೀಕ್ಷಾ ಅರ್ಜಿಗಳನ್ನು (ಹಾರ್ಡಕಾಫಿ) ಅವಶ್ಯ ದಾಖಲೆಗಳೊಂದಿಗೆ/ನಕಲು (ಝರಾಕ್ಸ್) ಅಂಕಪಟ್ಟಿಗಳೊಂದಿಗೆ ನೇರವಾಗಿ ಸಂಬಂಧಪಟ್ಟ ಕಚೇರಿ ಅಧೀಕ್ಷಕರು, ಪರೀಕ್ಷಾ ವಿಭಾಗ, ವಿಶ್ವಚೇತನ ಬಿಲ್ಡಿಂಗ್, ಕರ್ನಾಟಕ ವಿಶ್ವವಿದ್ಯಾಲಯ, ಪಾವಟೆನಗರ, ಧಾರವಾಡ–580003 ಗೆ ಅಂಚೆ ಮೂಲಕ ಅಥವಾ ಖುದ್ದಾಗಿ ಎಲ್ಲ ವಿಭಾಗದವರು/ಕೇಂದ್ರದವರು/ಮಹಾವಿದ್ಯಾಲಯದವರು ಸಲ್ಲಿಸುವುದು.

7. ಯು.ಯು.ಸಿ.ಎಂ.ಎಸ್ ತಂತ್ರಾಂಶದ ಮೂಲಕ ಪರೀಕ್ಷಾ ಅರ್ಜಿ ನಮೂನೆಗಳನ್ನು ತುಂಬಿಸುವಾಗ ತಿದ್ದುಪಡಿಯನ್ನು ತಪ್ಪಿಸಲು ಎಲ್ಲ ವಿಭಾಗದವರು/ಕೇಂದ್ರದವರು/ಮಹಾವಿದ್ಯಾಲಯದ ಸಿಬ್ಬಂದಿಗಳು ವಿದ್ಯಾರ್ಥಿಗಳಿಗೆ ನಿರ್ದೇಶನ ನೀಡುವುದು ಯಾವುದೇ ತಿದ್ದುಪಡಿಗಳು/ ತಪ್ಪುಗಳು ಉಂಟಾದರೆ ಎಲ್ಲ ವಿಭಾಗದವರು / ಕೇಂದ್ರದವರು / ಮಹಾವಿದ್ಯಾಲಯದವರು ಜವಾಬ್ದಾರರಾಗಿರುತ್ತಾರೆ.

8. ಪರೀಕ್ಷೆಗೆ ಸಂಬಂದಿಸಿದಂತೆ ಶುಲ್ಕಗಳನ್ನು ವಿಶ್ವವಿದ್ಯಾಲಯಕ್ಕೆ ಭರಣ ಮಾಡಿದ ನಂತರ ಯಾವುದೇ ಕಾರಣಕ್ಕೂ ಮರಳಿ ಕೊಡುವುದಿಲ್ಲ.

**ಪು.ತಿ.ನೋ**

## ಪರೀಕ್ಷಾ ಶುಲ್ಕದ ವಿವರಗಳು

| ಅ.ನಂ. | ವಿವರ | ಶುಲ್ಕ ₹ |
|---|---|---|
| 01 | ಪರೀಕ್ಷಾ ಅರ್ಜಿ ಶುಲ್ಕ | 110/- |
| 02 | ಅಂಕಪಟ್ಟಿ ಶುಲ್ಕ | 160/- |
| 03 | ಉತ್ತೀರ್ಣ ಪ್ರಮಾಣ ಪತ್ರ ಶುಲ್ಕ (ಕೊನೆಯ ಸೆಮೆಸ್ಟರಿಗೆ ಮಾತ್ರ) | 215/- |
| 04 | ಪ್ರೋಜೆಕ್ಟ/ಫೀಲ್ಡ ವರ್ಕ ರಿಪೋರ್ಟ ಮೌಲ್ಯಮಾಪನ/ವೈವಾ ಶುಲ್ಕ<br>ಸೂಚನೆ: ಪ್ರೋಜೆಕ್ಟ/ಫೀಲ್ಡ ವರ್ಕ ತೆಗೆದುಕೊಂಡ ಸಂಬಂಧಪಟ್ಟ ಸ್ನಾತಕೋತ್ತರ ವಿಭಾಗದ ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕದೊಂದಿಗೆ ರೂ. 590/-ನ್ನು ತುಂಬಬೇಕು. | 590/- |
| 05 | ಪರೀಕ್ಷಾ ಶುಲ್ಕ: ಎಂ.ಎಸ್.ಸಿ. ಅನ್ವಯಿಕ ಭೊಗೋಳಶಾಸ್ತ್ರ-2 ಮತ್ತು 4 ನೇ ಸೆಮೆಸ್ಟರ್ ಪ್ರತಿ ಸೆಮೆಸ್ಟರಗೆ | 650/- |
| | ಪರೀಕ್ಷಾ ಶುಲ್ಕ: ಎಂ.ಎ. ಭಾಷಾಶಾಸ್ತ್ರ-2 ಮತ್ತು 4 ನೇ ಸೆಮೆಸ್ಟರ್ ಪ್ರತಿ ಸೆಮೆಸ್ಟರಗೆ | 730/- |
| | ಪರೀಕ್ಷಾ ಶುಲ್ಕ: ಎಂ.ಎ. ಸಮಾಜವಿಜ್ಞಾನ-2 ಮತ್ತು 4 ನೇ ಸೆಮೆಸ್ಟರ್ ಪ್ರತಿ ಸೆಮೆಸ್ಟರಗೆ | 730/- |
| | ಪರೀಕ್ಷಾ ಶುಲ್ಕ: ಎಂ.ಎಸ್.ಡಬ್ಲ್ಯೂ ಸಮಾಜಕಾರ್ಯ-2 ಮತ್ತು 4 ನೇ ಸೆಮೆಸ್ಟರ್ ಪ್ರತಿ ಸೆಮೆಸ್ಟರಗೆ | 730/- |
| | ಪರೀಕ್ಷಾ ಶುಲ್ಕ: ಎಂ.ಎ. ಸಂಗೀತ.- 2 ಮತ್ತು 4 ನೇ ಸೆಮೆಸ್ಟರ್, ಪ್ರತಿ ಸೆಮೆಸ್ಟರಗೆ | 770/- |
| | ಪರೀಕ್ಷಾ ಶುಲ್ಕ: ಎಂ.ಕಾಂ.ವಾಣಿಜ್ಯಶಾಸ್ತ್ರ, ಯೋಗಾ ಅಧ್ಯಯನ 2 ಮತ್ತು 4 ನೇ ಸೆಮೆಸ್ಟರ್ ಪ್ರತಿ ಸೆಮೆಸ್ಟರಗೆ<br>ಎಂ.ಕಾಂ. 4 ನೇ ಸೆಮಿಸ್ಟರ್‌ಗೆ ರೂ.1580/- ಸಿ.ಬಿ.ಸಿ.ಎಸ್ (Including Project Fees) | 810/-<br>1580/- |
| | ಪರೀಕ್ಷಾ ಶುಲ್ಕ: ಎಂ.ಎಸ್.ಸಿ. 2 ಮತ್ತು 4 ನೇ ಸೆಮೆಸ್ಟರ್ ಪ್ರತಿ ಸೆಮೆಸ್ಟರಗೆ | 950/- |
| | ಪರೀಕ್ಷಾ ಶುಲ್ಕ: ಎಂ.ಎಸ್.ಸಿ. ಮಾನವಶಾಸ್ತ್ರ-2 ಮತ್ತು 4 ನೇ ಸೆಮೆಸ್ಟರ್ ಪ್ರತಿ ಸೆಮೆಸ್ಟರಗೆ | 950/- |
| | ಪರೀಕ್ಷಾ ಶುಲ್ಕ: ಎಂ.ಎಸ್.ಸಿ. ಪಾಲಿಮರ ವಿಜ್ಞಾನ-2 ಮತ್ತು 4 ನೇ ಸೆಮೆಸ್ಟರ್ ಪ್ರತಿ ಸೆಮೆಸ್ಟರಗೆ | 950/- |
| | ಪರೀಕ್ಷಾ ಶುಲ್ಕ: ಎಂ.ಎಸ್.ಸಿ. ವಿದ್ಯುನ್ಮಾನ-2 ಮತ್ತು 4 ನೇ ಸೆಮೆಸ್ಟರ್ ಪ್ರತಿ ಸೆಮೆಸ್ಟರಗೆ | 950/- |
| | ಪರೀಕ್ಷಾ ಶುಲ್ಕ: ಎಂ.ಎಸ್.ಸಿ. ಕಡಲ ಜೀವಶಾಸ್ತ್ರ/ವಿಶ್ಲೇಷಕ ರಸಾಯನಶಾಸ್ತ್ರ/ಔದ್ಯೋಗಿಕ ರಸಾಯನಶಾಸ್ತ್ರ/ ಸಾಮಾನ್ಯ ರಸಾಯನಶಾಸ್ತ್ರ-2 ಮತ್ತು 4 ನೇ ಸೆಮೆಸ್ಟರ್ ಪ್ರತಿ ಸೆಮೆಸ್ಟರಗೆ | 950/- |
| | ಪರೀಕ್ಷಾ ಶುಲ್ಕ: ಎಂ.ಎಲ್.ಐ.ಸಿ. ಗ್ರಂಥಾಲಯ ಹಾಗೂ ಮಾಹಿತಿವಿಜ್ಞಾನ/ಎಂ.ಎ.ಮಹಿಳಾ ಅಧ್ಯಯನ 2 ಮತ್ತು 4 ನೇ ಸೆಮೆಸ್ಟರ್ ಪ್ರತಿ ಸೆಮೆಸ್ಟರಗೆ | 1100/- |
| | ಪರೀಕ್ಷಾ ಶುಲ್ಕ: ಎಂ.ಟಿ.ಟಿ.ಎಮ್ ಪ್ರವಾಸೋದ್ಯಮ- 2 ಮತ್ತು 4 ನೇ ಸೆಮೆಸ್ಟರ (Lateral Entry) ಪ್ರತಿ ಸೆಮೆಸ್ಟರಗೆ<br>1 ಪೇಪರಗೆ ₹.320/-, 2 ಪೇಪರಗಳು ₹.640/-, 3 ಪೇಪರಗಳು ₹.960/-, 4 ಕ್ಕಿಂತ ಹೆಚ್ಚು ಪೇಪರಗಳಿಗೆ ₹.1145/- | 1145/- |
| | ಪರೀಕ್ಷಾ ಶುಲ್ಕ: ಎಂ.ಇಡಿ. ಶಿಕ್ಷಣ- 2 ಮತ್ತು 4 ನೇ ಸೆಮೆಸ್ಟರ್ ಪ್ರತಿ ಸೆಮೆಸ್ಟರಗೆ | 1210/- |
| | ಪರೀಕ್ಷಾ ಶುಲ್ಕ: ಎಂ.ಪಿ.ಇಡಿ.ದೈಹಿಕ ಶಿಕ್ಷಣ- 2 ಮತ್ತು 4 ನೇ ಸೆಮೆಸ್ಟರ್ ಪ್ರತಿ ಸೆಮೆಸ್ಟರಗೆ | 1445/- |
| | ಪರೀಕ್ಷಾ ಶುಲ್ಕ: ಎಲ್.ಎಲ್.ಎಮ್.ಕಾನೂನು - 2 ಮತ್ತು 4 ನೇ ಪ್ರತಿ ಸೆಮೆಸ್ಟರಗೆ | 1610/- |
| | ಪರೀಕ್ಷಾ ಶುಲ್ಕ: ಎಂ.ಫಿ.ಎ.- 2 ಮತ್ತು 4 ನೇ ಸೆಮೆಸ್ಟರ್, ಪ್ರತಿ ಸೆಮೆಸ್ಟರಗೆ | 2160/- |
| | ಪರೀಕ್ಷಾ ಶುಲ್ಕ: ಎಂ.ಎಸ್.ಸಿ ಸೂಕ್ಷ್ಮಜೀವಿಶಾಸ್ತ್ರ- 2 ಮತ್ತು 4 ನೇ ಸೆಮೆಸ್ಟರ್ ಪ್ರತಿ ಸೆಮೆಸ್ಟರಗೆ | 2360/- |
| | ಪರೀಕ್ಷಾ ಶುಲ್ಕ: ಎಂ.ಎಸ್.ಸಿ ಜೈವಿಕ ತಂತ್ರಜ್ಞಾನ- 2 ಮತ್ತು 4 ನೇ ಸೆಮೆಸ್ಟರ್ ಪ್ರತಿ ಸೆಮೆಸ್ಟರಗೆ | 2360/- |
| | ಪರೀಕ್ಷಾ ಶುಲ್ಕ: ಎಂ.ಎಸ್.ಸಿ ಅನ್ವಯಿಕ ಅನುವಂಶಶಾಸ್ತ್ರ- 2 ಮತ್ತು 4 ನೇ ಸೆಮೆಸ್ಟರ್ ಪ್ರತಿ ಸೆಮೆಸ್ಟರಗೆ | 2360/- |
| | ಪರೀಕ್ಷಾ ಶುಲ್ಕ:: ಎಂ.ಎಸ್.ಸಿ ಪಲ್ಪ್ ಮತ್ತು ಪೇಪ್‌ರ ಸಾಯನ್ಸ-2 ಮತ್ತು 4 ನೇ ಸೆಮೆಸ್ಟರ್ ಪ್ರತಿ ಸೆಮೆಸ್ಟರಗೆ | 2585/- |
| | ಪರೀಕ್ಷಾ ಶುಲ್ಕ: ಎಂ.ಕಾಂ.(ಸಿ.ಎಸ್) 2 ಮತ್ತು 4 ನೇ ಸೆಮೆಸ್ಟರ್ ಪ್ರತಿ ಸೆಮೆಸ್ಟರಗೆ | 2680/- |
| | ಪರೀಕ್ಷಾ ಶುಲ್ಕ: ಎಂ.ಎಸ್.ಸಿ (ಕಂಪ್ಯೂಟರ ಸಾಯನ್ಸ್) 2 ಮತ್ತು 4 ನೇ ಸೆಮೆಸ್ಟರ್ ಪ್ರತಿ ಸೆಮೆಸ್ಟರಗೆ | 3015/- |
| | ಪರೀಕ್ಷಾ ಶುಲ್ಕ: ಮಾಸ್ಟರ್ ಇನ್ ಮಾರ್ಕೆಟಿಂಗ್ 2 ಮತ್ತು 4 ನೇ ಸೆಮೆಸ್ಟರ್ ಪ್ರತಿ ಸೆಮೆಸ್ಟರಗೆ | 3015/- |
| | ಪಿ.ಜಿ. ಡಿಪ್ಲೋಮಾ ಇನ್ ಅಂಬೇಡ್ಕರ ಸ್ಟಡೀಸ್ 2 ನೇ ಸೆಮೆಸ್ಟರ್ ಪ್ರತಿ ಸೆಮೆಸ್ಟರಗೆ | 950/- |
| | ಪಿ.ಜಿ. ಡಿಪ್ಲೋಮಾ ಇನ್ ಬಸವ ಸ್ಟಡೀಸ್ 2 ನೇ ಸೆಮೆಸ್ಟರ್ ಪ್ರತಿ ಸೆಮೆಸ್ಟರಗೆ | 950/- |
| | ಪಿ.ಜಿ. ಡಿಪ್ಲೋಮಾ ಇನ್ ಟ್ರಾನ್ಸಲೇಷನ್ 2 ನೇ ಸೆಮೆಸ್ಟರ್ ಪ್ರತಿ ಸೆಮೆಸ್ಟರಗೆ | 950/- |
| | ಪಿ.ಜಿ. ಡಿಪ್ಲೋಮಾ ಇನ್ ಎಪಿಗ್ರಫಿ 2 ನೇ ಸೆಮೆಸ್ಟರ್ ಪ್ರತಿ ಸೆಮೆಸ್ಟರಗೆ | 950/- |
| | ಪಿ.ಜಿ. ಡಿಪ್ಲೋಮಾ ಇನ್ ಗಾಂಧಿಯನ್ ಸ್ಟಡೀಸ್ 2 ನೇ ಸೆಮೆಸ್ಟರ್ ಪ್ರತಿ ಸೆಮೆಸ್ಟರಗೆ | 950/- |
| | ಪಿ.ಜಿ. ಡಿಪ್ಲೋಮಾ ಇನ್ ಜೈನಾಲಜಿ 2 ನೇ ಸೆಮೆಸ್ಟರ್ ಪ್ರತಿ ಸೆಮೆಸ್ಟರಗೆ | 950/- |
| | ಪಿ.ಜಿ. ಡಿಪ್ಲೋಮಾ ಇನ್ ಕನಕ ಸ್ಟಡೀಸ್ 2 ನೇ ಸೆಮೆಸ್ಟರ್ ಪ್ರತಿ ಸೆಮೆಸ್ಟರಗೆ | 1210/- |

ಪು.ತಿ.ನೋ

| | |
|---|---|
| ಪಿ.ಜಿ. ಡಿಪ್ಲೋಮಾ ಇನ್ ಲಿಂಗ್ವಿಸ್ಟಿಕ್ಸ್ / ಸಂಸ್ಕೃತ 2 ನೇ ಸೆಮಿಸ್ಟರ್ ಪ್ರತಿ ಸೆಮಿಸ್ಟರಗೆ | 950/- |
| ಪಿ.ಜಿ. ಡಿಪ್ಲೋಮಾ ಇನ್ ಪ್ರಾಚ್ಯ ಲೇಖನ 2 ನೇ ಸೆಮಿಸ್ಟರ್ ಪ್ರತಿ ಸೆಮಿಸ್ಟರಗೆ | 1335/- |
| ಪಿ.ಜಿ. ಡಿಪ್ಲೋಮಾ ಇನ್ ಟ್ರಾನ್ಸಲೇಷನ್ ಆ್ಯಂಡ ಆಫೀಶೀಯಲ್ ಕರಸ್ಪಾಂಡನ್ಸ ಇನ್ ಹಿಂದಿ 2 ನೇ ಸೆಮಿಸ್ಟರ್ | 950/- |
| ಪಿ.ಜಿ. ಡಿಪ್ಲೋಮಾ ಇನ್ ವುಮನ್ಸ ಸ್ಟಡೀಸ್ 2 ನೇ ಸೆಮಿಸ್ಟರ್ ಪ್ರತಿ ಸೆಮಿಸ್ಟರಗೆ | 1100/- |
| ಪಿ.ಜಿ. ಡಿಪ್ಲೋಮಾ ಇನ್ ಯೋಗಾ ಸ್ಟಡೀಸ್ 2 ನೇ ಸೆಮಿಸ್ಟರ್ ಪ್ರತಿ ಸೆಮಿಸ್ಟರಗೆ | 950/- |
| ಪಿ.ಜಿ. ಡಿಪ್ಲೋಮಾ ಇನ್ ಕೌನ್ಸಲಿಂಗ್ ಆ್ಯಂಡ ಸೈಕೋಥೆರಪಿ ಮತ್ತು 2 ನೇ ಸೆಮಿಸ್ಟರ್ ಪ್ರತಿ ಸೆಮಿಸ್ಟರ | 950/- |
| ಡಿಪ್ಲೋಮಾ ಇನ್ ಬಾಬು ಜಗಜೀವನರಾಮ ಸ್ಟಡೀಸ್ (PGDBJS) 2 ನೇ ಸೆಮಿಸ್ಟರ್ ಪ್ರತಿ ಸೆಮಿಸ್ಟರಗೆ | 950/- |
| ಪಿ.ಜಿ. ಡಿಪ್ಲೋಮಾ ಇನ್ PGDEF 2 ನೇ ಸೆಮಿಸ್ಟರ್ ಪ್ರತಿ ಸೆಮಿಸ್ಟರಗೆ | 1145/- |
| ಪಿ.ಜಿ. ಡಿಪ್ಲೋಮಾ ಇನ್ Archival and Modi ಸ್ಟಡೀಸ್ 2 ನೇ ಸೆಮಿಸ್ಟರ್ ಪ್ರತಿ ಸೆಮಿಸ್ಟರಗೆ | 950/- |
| ಪಿ.ಜಿ. ಡಿಪ್ಲೋಮಾ ಇನ್ ಕಂಪ್ಯೂಟರ ಅಪ್ಲಿಕೇಶನ್ 2 ನೇ ಸೆಮಿಸ್ಟರಗೆ ಪ್ರತಿ ಸೆಮಿಸ್ಟರ್ | 1580/- |
| ಡಿಪ್ಲೋಮಾ:ಹೋಟೆಲ್ & ಹಾಸ್ಪಿಟ್ಯಾಲಿಟಿ ಸರ್ವಿಸಸ್ 2 ನೇ ಸೆಮಿಸ್ಟರಗೆ ಪ್ರತಿ ಸೆಮಿಸ್ಟರ್ | 1145/- |
| ಪಿ.ಜಿ. ಡಿಪ್ಲೋಮಾ ಇನ್ PGDBM 2 ನೇ ಸೆಮಿಸ್ಟರ್ ಪ್ರತಿ ಸೆಮಿಸ್ಟರಗೆ | 1145/- |
| ಪಿ.ಜಿ. ಡಿಪ್ಲೋಮಾ ಇನ್ Human Rights Law 2 ನೇ ಸೆಮಿಸ್ಟರ್ ಪ್ರತಿ ಸೆಮಿಸ್ಟರಗೆ | 1145/- |
| ಪಿ.ಜಿ. ಡಿಪ್ಲೋಮಾ ಇನ್ Forensic Science 2 ನೇ ಸೆಮಿಸ್ಟರ್ ಪ್ರತಿ ಸೆಮಿಸ್ಟರಗೆ | 950/- |
| ಪಿ.ಜಿ. ಡಿಪ್ಲೋಮಾ ಇನ್ Veman Studies 2 ನೇ ಸೆಮಿಸ್ಟರ್ ಪ್ರತಿ ಸೆಮಿಸ್ಟರಗೆ | 950/- |
| ಪಿ.ಜಿ. ಡಿಪ್ಲೋಮಾ ಇನ್ Mass Communication & Journalism 2 ನೇ ಸೆಮಿಸ್ಟರ್ | 950/- |
| ಪಿ.ಜಿ. ಡಿಪ್ಲೋಮಾ ಇನ್ Chatrapati Shahu Maharaja Studies 2 ನೇ ಸೆಮಿಸ್ಟರ್ | 950/- |
| ಡಿಪ್ಲೋಮಾ: ಫ್ರೆಂಚ್/ಜರ್ಮನ/ರಷ್ಯಿಯನ್ 2 ನೇ ಸೆಮಿಸ್ಟರಗೆ ಪ್ರತಿ ಸೆಮಿಸ್ಟರ್ | 945/- |
| ಪಿ.ಜಿ. ಡಿಪ್ಲೋಮಾ ಇನ್ ಸಂಸ್ಕೃತ 2 ನೇ ಸೆಮಿಸ್ಟರ್ | 950/- |
| ಅಡ್ವಾನ್ಸ ಡಿಪ್ಲೋಮಾ: ಫ್ರೆಂಚ್/ಜರ್ಮನ/ರಷ್ಯಿಯನ್ 2 ನೇ ಸೆಮಿಸ್ಟರಗೆ ಪ್ರತಿ ಸೆಮಿಸ್ಟರ್ | 945/- |
| ಸರ್ಟಿಫಿಕೇಟ್ ಕೋರ್ಸ:ಕನ್ನಡ/ಮರಾಠಿ/ಸಂಸ್ಕೃತ/ಯೋಗಾ ಸ್ಟಡೀಸ್/ಫ್ರೆಂಚ್/ಜರ್ಮನ್/ರಷ್ಯಿಯನ್ 2 ನೇ ಸೆಮಿಸ್ಟರಗೆ ಪ್ರತಿ ಸೆಮಿಸ್ಟರ್ | 485/- |

ಸದರಿ ಮೇಲಿನ ಅಧಿಸೂಚನೆಯನ್ನು ಎಲ್ಲ ವಿದ್ಯಾರ್ಥಿಗಳ ಗಮನಕ್ಕೆ ತಂದು ಅದರಂತೆ ಪರೀಕ್ಷಾ ಫಾರ್ಮ/ಶುಲ್ಕಗಳನ್ನು ತುಂಬಿಸಿಕೊಳ್ಳುವುದು.

ಕುಲಸಚಿವರು(ಮೌಲ್ಯಮಾಪನ)

ಗೆ,

1) ಮುಖ್ಯಸ್ಥರು/ಸಂಯೋಜಕರು ಎಲ್ಲ ಸ್ನಾತಕೋತ್ತರ ವಿಭಾಗಗಳು ಕ.ವಿ.ವಿ ಧಾರವಾಡ
2) ಆಡಳಿತಾಧಿಕಾರಿಗಳು ಕ.ವಿ.ವಿ ಸ್ನಾತಕೋತ್ತರ ಕೇಂದ್ರ ಗದಗ, ಹಾವೇರಿ, ಕಾರವಾರ.
3) ಕವಿವಿ ವ್ಯಾಪ್ತಿಯ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರಿಗೆ.

**ಪ್ರತಿಗಳು ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ:**

1) ಹಣಕಾಸು ಅಧಿಕಾರಿಗಳು, ಹಣಕಾಸು ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
2) ಅಭಿವೃದ್ಧಿ ಅಧಿಕಾರಿಗಳು, ಅಂಕಿ ಸಂಖ್ಯೆ ವಿಭಾಗ/ ಶಿಷ್ಯವೇತನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
3) ನಿರ್ದೇಶಕರು, ವಿದ್ಯಾರ್ಥಿ ಕಲ್ಯಾಣ ವಿಭಾಗ,/ಎಸ್‌ಸಿ/ಎಸ್‌ಟಿ/ಕೆ-1/ಓಬಿಸಿ ಘಟಕ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
4) ನಿರ್ದೇಶಕರು ಮಾಹಿತಿ ತಂತ್ರಜ್ಞಾನ ವಿಭಾಗ ಕ.ವಿ.ವಿ. ಧಾರವಾಡ. **(ಅಧಿಸೂಚನೆಯನ್ನು ಅಂತರ್ಜಾಲದಲ್ಲಿ ಪ್ರಕಟಿಸುವುದು.)**
5) ಆಪ್ತಕಾರ್ಯದರ್ಶಿಗಳು, ಕುಲಪತಿಗಳು/ಕುಲಸಚಿವರು/ಕುಲಸಚಿವರು(ಮೌಲ್ಯಮಾಪನ)/ವಿತ್ತಾಧಿಕಾರಿಗಳು, ಕ ವಿ ವಿ, ಧಾರವಾಡ.
6) ಸಿಸ್ಟಮ್ ಎನಾಲಿಸ್ಟ್, ಪರೀಕ್ಷಾ ಗಣಕಯಂತ್ರ ವಿಭಾಗ, ಕ.ವಿ.ವಿ. ಧಾರವಾಡ.
7) ಉಪಕುಲಸಚಿವರು/ ಸಹಾಯಕ ಕುಲಸಚಿವರು, ಪರೀಕ್ಷಾ/ ಹಣಕಾಸು/ ವಿದ್ಯಾಮಂಡಳ ವಿಭಾಗ, ಕ ವಿ ವಿ, ಧಾರವಾಡ.
8) ಅಧೀಕ್ಷಕರು, ಹಣಕಾಸು/ ವಿದ್ಯಾಮಂಡಳ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
9) ಅಧೀಕ್ಷಕರು, ಗೌಪ್ಯ/ ಪ್ರಶ್ನೆಪತ್ರಿಕೆ/ ಬಿ.ಎ./ಬಿ.ಕಾಂ./ಬಿ.ಎಸ್.ಸಿ./ಕಾನೂನು/ಘಟಿಕೋತ್ಸವ ಪರೀಕ್ಷಾ ವಿಭಾಗ, ಕ ವಿ ವಿ, ಧಾರವಾಡ.